ಇ. ಇಲ್ಲ, ಆದಾಗ್ಯೂ ಬ್ಯಾಂಕು ಅಧಿಕಾರಿಗಳು ಏಳು ಜನ ಫಲಾನುಭವಿಗಳನ್ನು ಗುರುತಿಸುವಲ್ಲಿ ಹಾಗೂ ಅವರ ಸಾಲ ಮನ್ನಾ ಮಾಡುವಲ್ಲಿ ಕಣ್ ತಪ್ಪಿನಿಂದ ವಿಫಲರಾಗಿದ್ದುದು ನಿಜವಾಗಿರುತ್ತದೆ. ಯೋಜನೆಯು ಅಸ್ತಿತ್ವದಲ್ಲಿ ಇಲ್ಲವಾದ್ದರಿಂದ ಯಾವುದೇ ಪರಿಹಾರ ಈಗ ನೀಡಲು ಸಾಧ್ಯವಿಲ್ಲ.

ಈ. ನಡೆದಿರುವುದು ಇಲಾಖೆಯ ಗಮನಕ್ಕೆ ಬಂದಿರುವುದಿಲ್ಲ. ಆದ್ದರಿಂದ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಉ. ಬ್ಯಾಂಕ್ ಅಧಿಕಾರಿಗಳು ರಾಜ್ಯ ಬ್ಯಾಂಕಿನ ಪ್ರಾಧಿಕಾರದ ಕಾರ್ಯವ್ಯಾಪ್ತಿಯಲ್ಲಿ ಕೆಲಸ ಮಾಡುತ್ತಿದ್ದು ಅವರ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಲು ಆದೇಶಿಸಲಾಗುವುದು.

ಭೂಸ್ವಾಧೀನ ಕಾಯಿದೆಯಿಂದ ರೈತರಿಗೆ ತೊಂದರೆ.

325 (1692): ಶ್ರೀ ವೈ. ಎಂ. ವೀರಣ್ಣ (ದಾವಣಗೆರೆ):-

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಭೂಸ್ವಾಧೀನ ಕಾಯ್ದೆಯಿಂದ ರೈತರಿಗೆ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ. ಹಾಗಿದ್ದಲ್ಲಿ ಸರ್ಕಾರ ಆ ಬಗ್ಗೆ ಏನು ಕ್ರಮ ತೆಗೆದುಕೊಂಡಿವೆ ?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು):-

ಅ. ಹೌದು.

ಆ. ಸರ್ಕಾರ ಈ ಕೆಳಕಂಡಂತೆ ಸೂಕ್ತ ಕ್ರಮ ತೆಗೆದುಕೊಂಡಿದೆ.

1. ಭೂಮಾಲೀಕರಿಗೆ ಶೀಘ್ರವೇ ಪರಿಹಾರ ಕೊಡುವುದರ ಸಲುವಾಗಿ ಸರ್ಕಾರವು ಭೂಸ್ವಾಧೀನ ನಡವಳಿಗಳನ್ನು ನಿಗದಿತ ವೇಳೆಯಲ್ಲಿ ಪೂರ್ತಿ ಮಾಡುವುದಕ್ಕೆ ವೇಳಾ ಪಟ್ಟಿಯನ್ನು ಹೊರಡಿಸಿದೆ.

2. ಭೂಮಾಲೀಕರಿಗೆ ಯೋಗ್ಯ ಮಾರುಕಟ್ಟೆ ಬೆಲೆಯನ್ನು ನೀರಿದಂತೆ ಶೇ. 30 ಸೋಲೇಶಿಯಂ ಹಾಗೂ ಶೇ 12 ಹೆಚ್ಚುವರಿ ಹಣವನ್ನು ಕೊಡಲಾಗುತ್ತಿದೆ. ಇದಲ್ಲದೆ ಮರಮಟ್ಟುಗಳಿಗೆ ಪ್ರತ್ಯೇಕವಾಗಿ ಬೆಲೆಯನ್ನು ಸಹ ಕೊಡಲಾಗುತ್ತಿದೆ.

3. ಸರ್ಕಾರವು ದಿನಾಂಕ: 3.9.92ರ ಸಭೆಯಲ್ಲಿ ಎಲ್ಲಾ ಭೂಸ್ವಾಧೀನಾಧಿಕಾರಿಗಳಿಗೆ ಕಟ್ಟುನಿಟ್ಟಾಗಿ ಸೂಚನೆಗಳನ್ನು ನೀಡುತ್ತಾ ಪರಿಹಾರ ಹಣವನ್ನು ಯಾವುದೇ ರೀತಿ ವಿಳಂಬ ಮಾಡದೇ ತುರ್ತಾಗಿ ಕೊಡಬೇಕಾಗಿ ಸೂಚನೆ ಕೊಡಲಾಗಿದೆ.

4. ಅವಶ್ಯಕತೆ ಇದ್ದ ಕಡೆ ಪುನರ್ವಸತಿಯನ್ನು ಸರ್ಕಾರ ಮಾಡುತ್ತಿದೆ.

ಮೈಸೂರು ಜಿಲ್ಲೆಯಲ್ಲಿ ಹಂಚಲಾದ ದರಖಾಸ್ತು ಜಮೀನುಗಳ ವಿವರ.

326 (1573): ಶ್ರೀ ಎಂ. ಶ್ರೀನಿವಾಸಯ್ಯ (ಟಿ. ನರಸೀಪುರ):-

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. 1987 ರಿಂದ ಮೈಸೂರು ಜಿಲ್ಲೆಯಲ್ಲಿ ಎಷ್ಟು ಎಕರೆ ಜಮೀನನ್ನು ದರಖಾಸ್ತು ಮೂಲಕ ಹಂಚಲಾಗಿದೆ (ವಿವರ ನೀಡುವುದು);